ಸಾಕ್ಷಿಯನ್ನು ದಿಃ 22-04-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ವಾಯ್ ಡಿ ಟಿ ವಕೀಲರಿಂದ (ವಾದಿ ಪರವಾಗಿ)**

ನನ್ನ ತಂದೆ-ದ್ಯಾವಪ್ಪ, ತಾಯಿ-ರಾಯವ್ವ ಎಂದರೆ ಸರಿ. ನನ್ನ ತಂದೆ-ತಾಯಿಗೆ ನಾನು ಸೇರಿದಂತೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರ-ಸಹೋದರಿಯ ಮಧ್ಯೆ ಬಹಳ ವರ್ಷಗಳ ಹಿಂದೆ ವಾಟ್ನಿಯಾಗಿದೆ ಎಂದರೆ ಸರಿ. ಸದರಿ ವಾಟ್ನಿ ಪ್ರಕಾರ ನನ್ನ ಪಾಲಿಗೆ 15 ಎಕರೆ 20 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ನನ್ನ ಹೆಂಡತಿ ಶಾರವ್ವ ತೀರಿಕೊಂಡಿದ್ದಾಳೆ. ಗದಗ ಒಕ್ಕಲಗೇರಿಯರ ಗೆಳೆಯರ ಬಳಗ ಓಣಿಯಲ್ಲಿ ನಮ್ಮ ಪಿತ್ರಾರ್ಜಿತ ಮನೆ ಇದೆ ಎಂದರೆ ಸರಿ. ಅಲ್ಲಿದ್ದ ಹಳೆ ಮನೆ ತೆಗೆದು ನಾನು ಮತ್ತು ನನ್ನ ಅಣ್ಣ ಬೇರೆ ಬೇರೆ ಮನೆ ಹಾಕಿಸಿಕೊಂಡಿದ್ದೇವೆ ಎಂದರೆ ಸರಿ. ಇಬ್ಬರಿಗೂ ಪ್ರತ್ಯೇಕ ಮನೆ ಹಾಗೂ ಹಿತ್ತಲು ಇವೆ ಎಂದರೆ ಸರಿ. ಇಬ್ಬರ ಹಿತ್ತಲುಗಳಲ್ಲಿ ತಗಡಿನ ಶೆಡ್ಡುಗಳನ್ನು ಹಾಕಲಾಗಿದೆ ಎಂದರೆ ಸರಿ. ಸದರಿ ತಗಡಿನ ಶೆಡ್ಡುಗಳು 30 ವರ್ಷ ಹಳೆಯದಿವೆ ಎಂದು ಹೇಳುತ್ತಾರೆ. ನನ್ನ ಮನೆಯ ಹಿತ್ತಲಿನಲ್ಲಿರುವ ತಗಡಿನ ಶೆಡ್ಡುಗಳಲ್ಲಿ ವಾದಿ ಯಲ್ಲಪ್ಪ, ಪ್ರತಿವಾದಿ ನಂ.2 ಶೇಖಪ್ಪ, ಪ್ರತಿವಾದಿ ನಂ.3 ಈರಪ್ಪ ವಾಸವಾಗಿದ್ದಾರೆ. ವಾದಿಯರು ಹಾಗೂ ಪ್ರತಿವಾದಿಯ ನಂ.2 ರಿಂದ 9 ನನ್ನ ಮಕ್ಕಳು ಎಂದರೆ ಸರಿ. ವಾದಿ ನಂ.1 ಯಲ್ಲಪ್ಪನ ಮದುವೆ ಸುಮಾರು 20-30 ವರ್ಷಗಳ ಹಿಂದೆ ಆಗಿದೆ. 1 ನೇ ವಾದಿ ಯಲ್ಲಪ್ಪ ನಮ್ಮ ಮನೆತನದ ಕುರಿಗಳನ್ನು ಕಾಯುತ್ತಿದ್ದ ಎಂದರೆ ನಾನು ಅವನು ಕೂಡಿಯೇ ಕುರಿ ಕಾಯುತ್ತಿದ್ದೆವು ಎಂದು ಹೇಳುತ್ತಾರೆ. 1 ನೇ ವಾದಿಯ ಹೆಂಡತಿ ಬಂದ ನಂತರ ಮನೆಯಲ್ಲಿ ಹೊಂದಾಣಿಕೆ ಇರಲಿಲ್ಲ ಹಾಗಾಗಿ ಅವನು ನಮ್ಮೊಂದಿಗೆ ಬಹಳ ದಿನ ಕೂಡಿ ನಡೆಯಲಿಲ್ಲ ಎಂದರೆ ಸರಿ. ವಾದಿ ನಂ.1 ನಮ್ಮನ್ನು ಬಿಟ್ಟು ಬೇರೆಯಾದ ಎಂದರೆ ಸರಿಯಲ್ಲ. ಆದರೆ ನಮ್ಮ ಮನೆಯ ಹಿತ್ತಲಿನಲ್ಲಿರುವ ಶೆಡ್ಡಿನಲ್ಲಿ ಯಲ್ಲಪ್ಪ ತನ್ನ ಹೆಂಡತಿ

ಮಕ್ಕಳೊಂದಿಗೆ ವಾಸವಾಗಿದ್ದಾನೆ ಎಂದರೆ ಸರಿ. ಯಲ್ಲಪ್ಪ ಬೇರೆಯಾಗಿದ ಹಮಾಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಆತ ಕುಟುಂಬದಿಂದ ಬೇರೆಯಾಗಿಲ್ಲ ಎಂದು ಹೇಳುತ್ತಾರೆ. ವಾದಿ ಯಲ್ಲಪ್ಪ ಆಸ್ತಿಯಲ್ಲಿ ಪಾಲು ಕೊಡು ಎಂದು ನನ್ನನ್ನು ಕೇಳಿಲ್ಲ. 2015 ರಲ್ಲಿ ವಾದಿ ನಂ.1 ಯಲ್ಲಪ್ಪ ಪಾಲು ಕೇಳಿದ ಮತ್ತು ಕೂಡುಕುಟುಂಬದಿಂದ ಹೊರಹೋಗಲು ಬಯಸಿದ್ದ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಿಸಿಲ್ಲ. 2 ಎಕರೆ ಜಮೀನನ್ನು ವಾದಿ ಯಲ್ಲಪ್ಪನ ಹೆಸರಿನಲ್ಲಿ ನಾನೇ ಖರಿದಿ ಹಿಡಿದು ಕೊಟ್ಟಿದ್ದೇನೆ. ಆ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಿಸಿಲ್ಲ. ಎ ಪಿ ಎಮ್ ಸಿ ಹತ್ತಿರ ಇರುವ ಹಮಾಲರ ಪ್ಲಾಟನಲ್ಲಿ ಒಂದು ಪ್ಲಾಟ್ ನ್ನು 1 ನೇ ವಾದಿ ಯಲ್ಲಪ್ಪನ ಹೆಸರಿನಲ್ಲಿ ನಾನೇ ಖರೀದಿ ಹಿಡಿದು ಕೊಟ್ಟಿದ್ದೇನೆ. ಆ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಬರೆಯಿಸಿಲ್ಲ. ಎರಡೂ ಖರೀದಿ ಪತ್ರಗಳ ದಿನಾಂಕ ಗೊತ್ತಿಲ್ಲ. ಸದರಿ ಆಸ್ತಿಗಳನ್ನು 1 ನೇ ವಾದಿ ಯಾರಿಂದ ಖರೀದಿಸಿದ್ದಾರೆ ಎಂದರೆ ಜಮೀನನ್ನು ಕೋರಿ ಎನ್ನುವವರಿಂದ ಖರೀದಿಸಲಾಗಿದ್ದು, ಪ್ಲಾಟನ್ನು ಯಾರಿಂದ ಖರೀದಿಸಲಾಗಿ ಗೊತ್ತಿಲ್ಲ. ಸದರಿ ಜಮೀನು ಹಾಗೂ ಪ್ಲಾಟನ್ನು ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ ಗೊತ್ತಿಲ್ಲ. ಸದರಿ ಖರೀದಿ ಪತ್ರಗಳಿಗೆ ನಾನು ಸಹಿ ಮಾಡಿಲ್ಲ. ಒಟ್ಟು ಕುಟುಂಬದ ಆದಾಯದಿಂದ ಸದರಿ ಆಸ್ತಿಗಳನ್ನು ಖರೀದಿಸಲಾಗಿದೆ ಎಂದು ಖರೀದಿ ಪತ್ರಗಳಲ್ಲಿ ಬರೆದಿಲ್ಲ ಎಂದರೆ ಗೊತ್ತಿಲ್ಲ. ಆದರೆ ನಾನೆ ಹಣ ನೀಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಎರಡೂ ಆಸ್ತಿಗಳನ್ನು 1 ನೇ ವಾದಿ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿದ್ದು, ಅವು ಆತನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಈಗಲೂ ಸಹ 1 ನೇ ವಾದಿ ನಮ್ಮೊಂದಿಗೆ ಒಟ್ಟು ಕುಟುಂಬದಲ್ಲಿ ಇದ್ದಾನೆ ಎಂದು ಹೇಳುತ್ತಾರೆ.

2 ನೇಯ ಗಂಡನ ಮನೆಯೂ ಸಹ ಗದಗ ಎಂದರೆ ಸರಿ. ವಾದಿಯ ಗಂಡ ಎ ಪಿ ಎಮ್ ಸಿ, ಗದಗದ ಗೊಡಚಿ ಎನ್ನುವವರ ದಲ್ಲಾಳಿ ಅಂಗಡಿಯಲ್ಲಿ ಬಾರದಾನ

ಹೊಲಿಯುತ್ತಾನೆ ಎಂದರೆ ಸರಿ. 2 ನೇ ವಾದಿಯ ಮಕ್ಕಳು ಖಾಸಗಿ ಅಂಗಡಿಗಳಲ್ಲಿ ಕೂಲಿ ಮಾಡುತ್ತಾರೆ ಎಂದರೆ ಗೊತ್ತಿಲ್ಲ. 2 ನೇ ವಾದಿ ಸಹ ಬೇರೆ ಮನೆಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಗದಗ ನಗರದ ಪ್ಲಾಟ ನಂಬರ 57 ನ್ನು ನಾನು ಹಾಗೂ ನಿಂಗಪ್ಪ ಗುಳ್ಳಾನ್ನವರ ಕೂಡಿ ಖರೀದಿಸಿದ್ದೇವು ಎಂದರೆ ಸರಿ. ಸದರಿ ಆಸ್ತಿ ಪೈಕಿ ಗುಳ್ಳಾನವರ ಪಾಲಿನ ಪಶ್ಚಿಮ ಭಾಗದ ಅರ್ಧ ಭಾಗವನ್ನು ದಿಃ 15-02-2010 ರಂದು 2 ನೇ ವಾದಿ ಗಿರಿಜವ್ವ ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಪ್ರತಿಯನ್ನು ನಿಡಿಃ3 ರಂತೆ ನಾನೇ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿ ತಾನು ಖರೀದಿಸಿದ ಆಸ್ತಿಯಲ್ಲಿ ಮನೆ ಹಾಕಿಸಿಕೊಂಡಿದ್ದಾಳೆ ಎಂದರೆ ಸದರೆ ಮನೆಯನ್ನು ನಾನೇ ಕಟ್ಟಿಸಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸದರಿ ಪ್ಲಾಟ ಪೈಕಿ ನನ್ನ ಪಾಲಿನ ಅರ್ಧ ಹಿಸ್ಸೆ ಅಂದರೆ ಪೂರ್ವಭಾಗದ ಜಾಗವನ್ನು ಸಹ ನಾನು 2 ನೇ ವಾದಿಗೆ ದಿಃ24.06.2020 ರಂದು ರೂ.2 ಲಕ್ಷ 20 ಸಾವಿರಗಳಿಗೆ ಖರೀದಿ ಹಾಕಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಪ್ಲಾಟ ಹಾಗೂ ಖುಲ್ಲಾ ಜಾಗ 2 ನೇ ವಾದಿಯ ಸ್ವಯಾರ್ಜಿತ ಆಸ್ತಿಗಳಾಗಿವೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ಒಟ್ಟು ಕುಟುಂಬದ ಆಸ್ತಿಯಲ್ಲಿ 2 ನೇ ವಾದಿಗೆ ಪಾಲು ಕೊಡಬಾರದು ಎನ್ನುವ ದುರುದ್ದೇಶದಿಂದ ಖರೀದಿಪತ್ರಗಳನ್ನು ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಗೆ ಮನೆ ಕಟ್ಟಿಸುವ ಸಲುವಾಗಿ ರೂ. 13 ಲಕ್ಷ ಹಣ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾನು ಆ ರೀತಿ ಹೇಳಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಸಂಪೂರ್ಣ ಮನೆಯನ್ನೆ ನಾನೇ ಕಟ್ಟಿಸಿದ್ದೇನೆ ಎಂದು ಹೇಳುತ್ತಾರೆ. 2 ನೇ ವಾದಿಯ ಹೆಸರಿನಲ್ಲಿ ಆಸ್ತಿ ಖರೀದಿಸಿದ ಬಗ್ಗೆ ಮತ್ತು ನಾನು ಮನೆ ಕಟ್ಟಿಸಿದ ಬಗ್ಗೆ ಅವರ ಮತ್ತು ನನ್ನ ನಡುವೆ ಯಾವುದೇ ಒಪ್ಪಂದ ಆಗಿಲ್ಲ.

ದಿಃ16.07.2021 ರಂದು ನಮ್ಮ ಕುಟುಂಬದಲ್ಲಿ ವಾದಿಯರನ್ನು ಹೊರತುಪಡಿಸಿ ಖೊಟ್ಟಿ ವಾಟ್ನಿ ಪತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ರೀತಿ ನಮ್ಮ ಕುಟುಂಬದಲ್ಲಿ ಯಾವುದೇ ವಾಟ್ನಿ ಪತ್ರ ಆಗಿಲ್ಲ ಎಂದು ಹೇಳುತ್ತಾರೆ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಯಾವುದೇ ಹಕ್ಕು ಬದಲಾವಣೆಯಾಗಿಲ್ಲ. ನನಗೆ ಮತ್ತು ವಾದಿಯರಿಗೆ ಗೊತ್ತಿಲ್ಲದಂತೆ ನನ್ನ ಉಳಿದ ಮಕ್ಕಳು ಖೊಟ್ಟಿ ವಾಟ್ನಿ ಪತ್ರ ಮಾಡಿದ್ದಾರೆ ಎಂದರೆ ಅವರು ಮಾಡಿಕೊಂಡಿರಬಹುದು ಆದರೆ ನಾನು ವಾಟ್ನಿ ಮಾಡಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಸದರಿ ವಾಟ್ನಿ ಪತ್ರದ ಬಗ್ಗೆ ಗೊತ್ತಾದ ನಂತರ ವಾದಿಯರು ಕುಟುಂಬದ ಆಸ್ತಿಗಳಲ್ಲಿ ತಮ್ಮ ಪಾಲು ಕೊಡುವಂತೆ ನನ್ನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನೀವು ನೀವೆ ಏನಾದರೂ ಮಾಡಿಕೊಳ್ಳಿ ಎಂದು ನಾನು ಹೇಳಿದೆ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಗಳಲ್ಲಿ ವಾದಿಯರಿಗೆ ಕಾನೂನುಬದ್ಧ ಪಾಲು ಕೊಡಲು ನನ್ನದು ತಕರಾರು ಇಲ್ಲ. ವಾದಿಯರು ಖರೀದಿಸಿದ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಇದ್ದರೆ ಇಟ್ಟುಕೊಳ್ಳಲಿ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಯರ ಹಕ್ಕನ್ನು ನಷ್ಟಗೊಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.